KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Tel Ph No. 0836-2215267
Website : www.kud.ac.in

ನಂ:ಕವಿವಿ/ಪರೀಕ್ಷಾ/ಜಿಎಡಿ/E-97260/2026/245

ದಿನಾಂಕ: 01/06/2026

## ಸುತ್ತೋಲೆ

**ವಿಷಯ:** ಜೂನ್ 2026 ರಲ್ಲಿ ಜರುಗುವ ಎಲ್ಲ ಸ್ನಾತಕ ಪದವಿಯ NEP ಹಾಗೂ Revised NEP ಲಿಖಿತ ಪರೀಕ್ಷೆಗಳ ಪ್ರವೇಶ ಪತ್ರಗಳನ್ನು ಯು.ಯು.ಸಿ.ಎಂ.ಎಸ್ ತಂತ್ರಾಂಶದಿಂದ ಪಡೆದುಕೊಳ್ಳುವ ಕುರಿತು.

**ಉಲ್ಲೇಖ:** 1) Revised NEP ಪರಿಷ್ಕೃತ ವೇಳಾಪಟ್ಟಿ ಸಂಖ್ಯೆ:232, ದಿನಾಂಕ:27/05/2026

2) NEP ಪರಿಷ್ಕೃತ ವೇಳಾಪಟ್ಟಿ ಸಂಖ್ಯೆ:231, ದಿನಾಂಕ:27/05/2026.

****@****

ಕ.ವಿ.ವಿ. ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಎಲ್ಲ ಸ್ನಾತಕ ಪದವಿಯ Revised NEP ಹಾಗೂ NEP 2, 4, 6 ಮತ್ತು 8 ನೇ ಸೆಮಿಸ್ಟರ್ (ರೆಗ್ಯೂಲರ್/ರಿಪೀಟರ್) ಲಿಖಿತ ಪರೀಕ್ಷೆಗಳನ್ನು ದಿನಾಂಕ:10/06/2026 ರಿಂದ ಜರುಗಿಸಲು ಉಲ್ಲೇಖಿತ 1 ಮತ್ತು 2 ರ ಮೂಲಕ ಪರಿಷ್ಕೃತ ವೇಳಾಪಟ್ಟಿಗಳನ್ನು ಕ.ವಿ.ವಿ. ಅಂತರಜಾಲ www.kud.ac.in (Exam Notification) ದಲ್ಲಿ ಪ್ರಕಟಿಸಲಾಗಿರುತ್ತದೆ. ವಿದ್ಯಾರ್ಥಿಗಳಿಗೆ ಸದರ ಪರೀಕ್ಷೆಯ ಪ್ರವೇಶ ಪತ್ರ (Exam Hall Ticket) ಅನ್ನು ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಈ ಕೆಳಕಂಡ ದಿನಾಂಕದಿಂದ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗುವುದು.

| ಅ.ನಂ | ಕೋರ್ಸ್/ಸೆಮಿಸ್ಟರ್ | ಪ್ರವೇಶ ಪತ್ರ ಪಡೆಯುವ ದಿನಾಂಕ |
|---|---|---|
| 1 | Revised NEP 2 & 4 ಸೆಮಿಸ್ಟರ್ | 03/06/2026 ರಿಂದ |
| 2 | NEP 2, 4, 6 & 8 ನೇ ಸೆಮಿಸ್ಟರ್ | 04/06/2026 ರಿಂದ |

ಆದುದರಿಂದ, ಯು.ಯು.ಸಿ.ಎಂ.ಎಸ್. ತಂತ್ರಾಂಶದಿಂದ ಪರೀಕ್ಷಾ ಪ್ರವೇಶ ಪತ್ರವನ್ನು ಪಡೆದುಕೊಂಡ ನಂತರ ಕಡ್ಡಾಯವಾಗಿ ಕ.ವಿ.ವಿ.ಅಂತರಜಾಲದಲ್ಲಿ ದಿನಾಂಕ:27/05/2026 ರಂದು ಪ್ರಕಟಿಸಲಾಗಿರುವ ಪರಿಷ್ಕೃತ ವೇಳಾಪಟ್ಟಿಯೊಂದಿಗೆ ಪರಿಶೀಲಿಸಿ ಏನಾದರು ವ್ಯತ್ಯಾಸ ಕಂಡುಬಂದಲ್ಲಿ ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ ಪರೀಕ್ಷಾ ದಿನಾಂಕ & ವೇಳೆಯನ್ನು ತಿದ್ದುಪಡಿ ಮಾಡಿಕೊಂಡು ಪ್ರಾಚಾರ್ಯರು ಸಹಿ ಮತ್ತು ಮೊಹರು ಹಾಕಿ ಪ್ರವೇಶ ಪತ್ರವನ್ನು ವಿದ್ಯಾರ್ಥಿಗಳಿಗೆ ನೀಡಲು ಈ ಮೂಲಕ ಸೂಚಿಸಲಾಗಿದೆ.

ಮುಂದುವರೆದು, ಪ್ರಶ್ನೆ ಪತ್ರಿಕೆಗಳ ಪಾಕೇಟ್ ಮೇಲಿನ ದಿನಾಂಕ & ವೇಳೆಯನ್ನು ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ ಪರಿಶೀಲಿಸಿ ದೃಢಪಡಿಸಿಕೊಂಡು ಪರೀಕ್ಷೆಗಳನ್ನು ಕಟ್ಟುನಿಟ್ಟಾಗಿ ಜರುಗಿಸಲು ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸಲಾಗಿದೆ. ತಪ್ಪಿದ್ದಲ್ಲಿ ಸಂಬಂಧಪಟ್ಟ ಮಹಾವಿದ್ಯಾಲಯದ ಪ್ರಾಚಾರ್ಯರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

30/5/2026

ಕುಲಸಚಿವರು(ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು ಹಾಗೂ ವಿದ್ಯಾರ್ಥಿಗಳು.

ಪ್ರತಿಗಳು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:

1) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. (ಅಧಿಸೂಚನೆಯನ್ನು ಅಂತರ್ಜಾಲದಲ್ಲಿ ಪ್ರಕಟಿಸುವುದು)
2) ಸಿಸ್ಟಮ್ ಎನಾಲಿಸ್ಟ್, ಪರೀಕ್ಷಾ ಗಣಕಯಂತ್ರ ವಿಭಾಗ, ಕ.ವಿ.ವಿ. ಧಾರವಾಡ
3) ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕ ವಿ ವಿ, ಧಾರವಾಡ.
4) ಅಧೀಕ್ಷಕರು, ಗೌಪ್ಯ/ಪ್ರಶ್ನೆಪತ್ರಿಕೆ/ಬಿ.ಎ./ಬಿ.ಕಾಂ./ಬಿ.ಎಸ್.ಸಿ./ಕಾನೂನು/ಸ್ನಾತಕೋತ್ತರ ಪರೀಕ್ಷಾ ವಿಭಾಗ, ಕವಿವಿ, ಧಾರವಾಡ.
5) ಆಪ್ತಕಾರ್ಯದರ್ಶಿಗಳು, ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ)/ವಿತ್ತಾಧಿಕಾರಿಗಳು, ಕವಿವಿ, ಧಾರವಾಡ.